ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 19-02-2017

## ಪತ್ರಿಕಾ ಆಮಂತ್ರಣ

1. ಕನ್ನಡ ಮತ್ತು ಸಂಸ್ಕೃತಿ ಇಲಾಖಾವತಿಯಿಂದ
ಕವಿ ಸರ್ವಜ್ಞ ಜಯಂತಿ:

ಉದ್ಘಾಟನೆ:

ಶ್ರೀಮತಿ ಉಮಾಶ್ರೀ. ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಅಧ್ಯಕ್ಷತೆ:
ಆರ್. ವಿ. ದೇವರಾಜ್,
ಅಧ್ಯಕ್ಷರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಹಾಗೂ ಶಾಸಕರು,
ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ.

ವಿಶೇಷ ಉಪನ್ಯಾಸ:

ಡಾ. ಎಂ.ಎಸ್. ಆಶಾದೇವಿ,
ಹಿರಿಯ ವಿಮರ್ಶಕರು.

ದಿನಾಂಕ: 20-02-2017, ಸೋಮವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

2. ಕೃಷಿ ಬೆಲೆ ಆಯೋಗದ ಪ್ರಾಯೋಜಿತ ಕಾರ್ಯಕ್ರಮ "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ" ಕುರಿತು ಒಂದು ದಿನದ ಪ್ರಾರಂಭಿಕ ಕಾರ್ಯಾಗಾರ:
ಕೈಪಿಡಿ ಬಿಡುಗಡೆ
ಕೃಷ್ಣಭೈರೇಗೌಡರು, ಕೃಷಿ ಸಚಿವರು.

ಪ್ರಧಾನ ಭಾಷಣ:

ಡಾ. ದೇವೇಂದ್ರ ಶರ್ಮ, ಖ್ಯಾತ ಕೃಷಿ ಮತ್ತು ಆಹಾರ ನೀತಿ ವಿಮರ್ಶಕ.

ದಿನಾಂಕ: 20–02–2017, ಸೋಮವಾರ, ಸಮಯ: ಬೆಳಿಗ್ಗೆ 10.30 ಗಂಟೆಗೆ
ಸ್ಥಳ: ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ, (ಐಸೆಕ್)
ಡಾ. ವಿ.ಕೆ.ಆರ್.ವಿ. ರಸ್ತೆ, ನಾಗರಬಾವಿ, ಬೆಂಗಳೂರು – 560 072.

3. ಜಂಟಿ ಪತ್ರಿಕಾಗೋಷ್ಠಿ:

"13ನೇ ಕೃಷಿ ವಿಜ್ಞಾನ ಕಾಂಗ್ರೆಸ್" ಕುರಿತಂತೆ

ಡಾ. ಎಸ್. ಅಯ್ಯಪ್ಪನ್, ಮಹಾ ನಿರ್ದೇಶಕರು, (ನಿವೃತ್ತ) ಭಾರತೀಯ ಅನುಸಂಧಾನ ಪರಿಷತ್ ನವದೆಹಲಿ ಮತ್ತು ಅಧ್ಯಕ್ಷರು ರಾಷ್ಟ್ರೀಯ ಕೃಷಿ ವಿಜ್ಞಾನಗಳ ಅಕಾಡೆಮಿ, ನವದೆಹಲಿ ಹಾಗೂ
ಡಾ. ಹೆಚ್. ಶಿವಣ್ಣ, ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
ದಿನಾಂಕ: ದಿನಾಂಕ: 20–02–2017, ಸೋಮವಾರ, ಸಮಯ: ಮಧ್ಯಾಹ್ನ 12.00 ಗಂಟೆಗೆ.

ಸ್ಥಳ: ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿ.ಕೆ.ವಿ.ಕೆ) ಯ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಬೆಂಗಳೂರು.

ಸೂಚನೆ: ಈ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದ್ದು, ವಾಹನವು ಅಂದು ಬೆಳಿಗ್ಗೆ 11.00 ಗಂಟೆಗೆ ನಗರದ ಕಬ್ಬನ್ ಪಾರ್ಕ್‌ನಲ್ಲಿರುವ ಪ್ರೆಸ್‌ಕ್ಲಬ್ ಆವರಣದಿಂದ ನಿಗದಿತ ಸ್ಥಳದತ್ತ ತೆರಳಲಿದೆ.

ಸಂಪರ್ಕ: ಡಾ. ಕೆ. ಶಿವರಾಮು, ಪ್ರಾಧ್ಯಾಪಕರು ಹಾಗೂ ಹಿರಿಯ ವಾರ್ತಾತಜ್ಞರು,
ಮೊಬೈಲ್ ಸಂಖ್ಯೆ 9972035456

# ಪತ್ರಿಕಾ ಪ್ರಕಟಣೆ

## ಚರಿತ್ರೆ ತಿಳಿದವನು ಮಾತ್ರ ಉತ್ತಮ ಭವಿಷ್ಯವನ್ನು ರೂಪಿಸಬಲ್ಲ – ಮಾಜಿ ಸಚಿವ ಪಿ.ಜಿ.ಆರ್ ಸಿಂಧ್ಯಾ

ಬೆಂಗಳೂರು, ಫೆಬ್ರವರಿ 19, (ಕರ್ನಾಟಕ ವಾರ್ತೆ)

ಚರಿತ್ರೆ ತಿಳಿದವನು–ವರ್ತಮಾನ ಅರಿತವನು ಮಾತ್ರ ಉತ್ತಮ ಭವಿಷ್ಯ ರೂಪಿಸಬಲ್ಲ, ಚರಿತ್ರೆಯನ್ನು ವಿಕೃತ ಮಾಡಬೇಡಿ ಮತ್ತು ಸ್ವಹಿತಶಕ್ತಿಗಾಗಿ ತಿರುಚಬೇಡಿ ಎಂದು ಮಾಜಿ ಸಚಿವ ಪಿ.ಜಿ.ಆರ್ ಸಿಂಧ್ಯಾ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಇಂದು ಹಮ್ಮಿಕೊಂಡಿದ್ದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ವಿಶೇಷ ಉಪನ್ಯಾಸ ನೀಡಿದ ಅವರು ಸ್ವಾತಂತ್ರ್ಯ ಮುಂಚಿನ ಭಾರತಕ್ಕೂ ಮತ್ತು ನಂತರದ ಭಾರತಕ್ಕೂ ಸಾಕಷ್ಟು ವ್ಯತ್ಯಾಸಗಳಿದ್ದು ಚರಿತ್ರೆಯನ್ನು ನಮ್ಮ ಇಂದಿನ ಸ್ಥಿತಿಗೆ ತಕ್ಕಂತೆ ನೋಡಬಾರದು, ಶಿವಾಜಿ ಜಗತ್ತಿನ ಒಬ್ಬ ಮಹಾನ್ ವೀರ, ಅವರು ಕೇವಲ ಮರಾಠರ ಅಥವಾ ಮಹಾರಾಷ್ಟ್ರದ ಸ್ವತ್ತಲ್ಲ, ಅವರೊಬ್ಬ ಸರ್ವರಿಗೂ ಸೇರಿದ ಇತಿಹಾಸದ ಮಹಾರಾಜ, ಅವರ ಮೂಲ ಕರ್ನಾಟಕದಲ್ಲಿ ಸಹ ಕಾಣಬಹುದು.

ಶಿವಾಜಿ ಒಬ್ಬ ರಾಜ ನೀತಿ ಪರಿಣಿತ, ದಕ್ಷ ಆಡಳಿತಗಾರ, ಎಲ್ಲಾ ಜನಾಂಗಗಳಿಗೂ ಸಮಾನ ಅವಕಾಶ ನೀಡಿದ ಸೇನಾ ನಾಯಕ ಮತ್ತು ಶಾಂತಿ ಪ್ರಿಯ, ಅವರ ಚರಿತ್ರೆಯನ್ನು ಇಂದಿನ ತಲೆಮಾರಿಗೆ ತಿಳಿಸುವ ಕೆಲಸ ನೆಡೆಯಬೇಕು. ಇತ್ತೀಚಿಗೆ ಜಗತ್ತಿನಲ್ಲಿ 20 ವರ್ಷಗಳ ಕಾಲ ನಡೆದ ಅಮೇರಿಕಾ ಮತ್ತು ವಿಯಾಟ್ನಂ ಯುದ್ಧದಲ್ಲಿ ಅಮೇರಿಕಾ ಅಂಥ ಬಲಿಷ್ಠ ದೇಶವನ್ನು ಸೋಲಿಸಿದ ವಿಯಾಟ್ನಂ ಅಧ್ಯಕ್ಷ ತಮ್ಮ ಈ ಯುದ್ಧದ ಗೆಲುವಿಗೆ ಇತಿಹಾಸ ಓದಿದ್ದು ಸಹಾಯವಾಯಿತು ಮತ್ತು ಭಾರತದ ಶಿವಾಜಿ ಮಹಾರಾಜರ ಯುದ್ಧ ತಂತ್ರ ಪ್ರೇರಣೆ ಎಂದು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಆಡಳಿತ ಮಂಡಳಿ ಅಧ್ಯಕ್ಷ ವಿ.ಎ.ರಾಣೋಜಿರಾವ್ ಸಾಠೆ ಮಾತನಾಡಿ ಶಿವಾಜಿ ಜಯಂತಿಯನ್ನು ಸರ್ಕಾರ ಆಚರಿಸುತ್ತಿರುವುದಕ್ಕೆ ಮತ್ತು ಜನಾಂಗದ ವಿವಿಧ ಕಾರ್ಯಗಳಿಗೆ ಪ್ರಸ್ತುತ ಸಾಲಿನಲ್ಲಿ ಸರ್ಕಾರ 5 ಕೋಟಿ 80 ಲಕ್ಷ ಅನುದಾನ ಬಿಡುಗಡೆ ಮಾಡಿರುವುದಕ್ಕೆ ಹರ್ಷ ವ್ಯಕ್ತಪಡಿಸಿ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಿದರು.

ತಮ್ಮ ಜನಾಂಗವನ್ನು 3ಬಿ ಯಿಂದ 2ಎಗೆ ಸೇರಿಸಲು ಮತ್ತು ಜನಾಂಗದ ಸರ್ವತೋಮುಖ ಅಭಿವೃದ್ಧಿಗಾಗಿ ನಿಗಮವೊಂದನ್ನು ಸ್ಥಾಪಿಸುವಂತೆ ಒತ್ತಾಯಿಸಿ ನಿಯೋಗವೊಂದು ಮುಖ್ಯಮಂತ್ರಿಗಳನ್ನು ಶೀಘ್ರದಲ್ಲಿ ಬೇಟಿ ಮಾಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ರಾಜ್ಯಾಧ್ಯಕ್ಷ ಎಸ್. ಸುರೇಶ್ ರಾವ್ ಸಾಠೆ, ಪ್ರಧಾನ ಕಾರ್ಯದರ್ಶಿ ಜಿ.ಆರ್.ಹನುಮಂತರಾವ್ ಪನ್ನಾಳೆ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮಗಳು: ಛತ್ರಪತಿ ಶಿವಾಜಿ ಮಹಾರಾಜರ ಸ್ತಬ್ಧಚಿತ್ರ ಹಾಗೂ ಜಾನಪದ ಕಲಾತಂಡಗಳ ಮೆರವಣಿಗೆ ಮಿನರ್ವ ವೃತ್ತದ ಅರಸೋಜಿರಾವ್ ಛತ್ರದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಕರಡಿ ಮಜಲು, ಗೊರವ ಕುಣಿತ, ಡೊಳ್ಳು ಕುಣಿತ ಮತ್ತು ಕೀಲು ಕುದುರೆ ಜನರ ಕಣ್ಮನ ಸೆಳೆದವು.

ಕಾರ್ಯಕ್ರಮದ ವೇದಿಕೆಯಲ್ಲಿ ಬಾಗಲಕೋಟೆ ಜಿಲ್ಲೆಯ ವೆಂಕಪ್ಪ ಅಂಬಾಜಿ ಸುಗತೇಕರ್ ಮತ್ತು ಕಲಾ ತಂಡ ನೆಡೆಸಿಕೊಟ್ಟ ಗೊಂದಲಿಗರ ಹಾಡುಗಳು ವಿಶೇಷವಾಗಿತ್ತು.